ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ, ಕಾನೂನು, ಸಂಸದೀಯ ವ್ಯವಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಸ್ಥಿರಾಸ್ತಿಗಳ ವಾರ್ಷಿಕ ಪರಿಶೀಲನೆಗಳನ್ನು ಪರಿಷ್ಕರಿಸಲು ನೋಟೀಸುಗಳನ್ನು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಕೆಲವು ತಕರಾರುಗಳು ಬಂದಿವೆ.

ಇ) ಒಪ್ಪುವುದಿಲ್ಲ.

ಈ) ಮಹಾನಗರ ಪಾಲಿಕೆಗೆ ಸೂಕ್ತ ಕ್ರಮ ಕೈಕೊಳ್ಳಲು ಅಧಿಕಾರವಿದೆ, ಹಾಗೂ ಕಾನೂನಿನಲ್ಲಿ ಅವಕಾಶವಿದೆ.

ಒಳಚರಂಡಿ ಮತ್ತು ಕುಡಿಯುವ ನೀರಿನ ವ್ಯವಸ್ಥೆ

೧೪೯ (೫೫೫) ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಆಗ್ರಹಾರ ದಾಸರಹಳ್ಳಿ, ಮಂಜುನಾಥನಗರ, ಬೋವಿಪಾಳ್ಯ, ಕೋಡಿ ಬಸವಣ್ಣನ ಪ್ರದೇಶ (ಅಂಡಾಳಮ್ಮ ಮಠದ ಬಳಿ) ಶಿವನಹಳ್ಳಿ, ಈ ಎಲ್ಲಾ ಸ್ಥಳಗಳಲ್ಲೂ ವರ್ಷಾಂತರಗಳಿಂದ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ಭಾಗಗಳಲ್ಲಿ ನೀರಿನ ಮೈನ್ ಅಥವಾ ಸಬ್ ಮೈನ್ ಒಳಚರಂಡಿ ವ್ಯವಸ್ಥೆ ಇವುಗಳನ್ನು ಹಾಕಿಸಬೇಕೆಂದು ಅನೇಕ ದಿನಗಳಿಂದ ಜನತೆ ಮತ್ತು ಅವರ ಪ್ರತಿನಿಧಿಗಳು ಒತ್ತಾಯ ಮಾಡುತ್ತಿದ್ದರೂ ಸಹ ಮಹಾ ನಗರ ಪಾಲಿಕೆ ಅಸಡ್ಡೆ ವಹಿಸುತ್ತಿರುವುದಕ್ಕೆ ಕಾರಣಗಳೇನು?

ಇ) ಈ ಅತಿ ಮುಖ್ಯ ಸಮಸ್ಯೆ ಬಗೆಹರಿಸಲು ತುರ್ತು ಕ್ರಮವನ್ನು ಸರ್ಕಾರದವರು ಕೈಗೊಳ್ಳುತ್ತಾರೆಯೇ?

ಶ್ರೀ ಎ. ಲಕ್ಷ್ಮೀಸಾಗರ್ (ನ್ಯಾಯ ಮತ್ತು ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು).—

ಅ) ರಾಜಾಜಿನಗರದ ವಿಧಾನಸಭಾ ಕ್ಷೇತ್ರದ ಆಗ್ರಹಾರ ದಾಸರಹಳ್ಳಿ, ಬೋವಿಪಾಳ್ಯ, ಕೋಡಿ ಬಸವಣ್ಣನ ಪ್ರದೇಶ (ಅಂಡಾಳಮ್ಮ ಮಠದ ಬಳಿ) ಶಿವನಹಳ್ಳಿ, ಮಂಜುನಾಥನಗರ ಈ ಸ್ಥಳಗಳಲ್ಲಿ ಕೆಲವು ಭಾಗಗಳಿಗೆ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಇರುತ್ತದೆ. ಅನಧಿಕೃತ ವಸತಿ ಪ್ರದೇಶಗಳಲ್ಲಿ ಮಾತ್ರ ಈ ಸವಲತ್ತನ್ನು ಒದಗಿಸಬೇಕಾಗಿದೆ.

ಆ) ಈ ಭಾಗಗಳಲ್ಲಿ ನೀರಿನ ಮೈನ್ ಅಥವಾ ಸಬ್ ಮೈನ್ ಒಳಚರಂಡಿ ಇವುಗಳನ್ನು ಹಾಕಿಸಬೇಕೆಂದು ಜನತೆಯು ಮತ್ತು ಅವರ ಪ್ರತಿನಿಧಿಗಳು ಕೇಳುತ್ತಿರುವುದು ನಿಜ. ಆದರೆ ಮಹಾನಗರ ಪಾಲಿಕೆಯು ಅಸಡ್ಡೆ ವಹಿಸಿರುವುದಿಲ್ಲ.

ಇ) ಈ ಭಾಗಗಳಲ್ಲಿ ಮಹಾನಗರ ಪಾಲಿಕೆ ಈಗಾಗಲೇ ಕುಡಿಯುವ ನೀರಿನ ಮತ್ತು ಒಳಚರಂಡಿ ವ್ಯವಸ್ಥೆ ಮಾಡಲು ಮಂಜೂರಾತಿ ನೀಡಲಾಗಿದ್ದು, ಬೆಂಗಳೂರು ಜಲ ಮತ್ತು ಒಳಚರಂಡಿ ಮಂಡಲಿಗೆ ಹಣವನ್ನು ಬಹುಭಾಗ ಪಾವತಿ ಮಾಡಲಾಗಿದೆ. ಹಾಗೂ ಕೆಲಸವನ್ನು ಕೆಲವು ಕಡೆ ಪ್ರಾರಂಭಿಸಿದ್ದಾರೆ. ಮತ್ತು ಉಳಿದ ಕೆಲಸವನ್ನು ಪೂರ್ತಿಯಾಗಿ ೮೭–೮೮ನೇ ಸಾಲಿನ ಕೊನೆಯಲ್ಲಿ ಮುಗಿಸುವ ಸಾಧ್ಯತೆ ಇದೆ.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಎಂ. ವೀರಯ್ಯ ಸ್ವಾಮಿ.—ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ವಿಷಯಗಳ ಸಂಬಂಧಿಸಿದಂತೆ ಇರುವ ಅರ್ಜಿಯನ್ನು ಸಭೆಯ ಮುಂದೆ ಇಡುತ್ತೇನೆ.

"Construction of for Government Ayurvedic Hospital in Salgar Basanthapur village Chikkodi taluk, Gulbarga district.

(2) Sanction of Rural Veterinary Hospital to Salgar Basanthapura village in Chikkodi taluk, Gulbarga district''.

ಅಧ್ಯಕ್ಷರು.—ಅರ್ಜಿಯನ್ನು ಒಪ್ಪಿಸಲಾಯಿತು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ನನ್ನ ಹೆಸರಿನ ಮುಂದೆ ಇರತಕ್ಕ Construction of new Bridge on Hiranyakeshi River near Badakudri village, Hukkeri taluk Belgaum district ಎನ್ನುವ ಅರ್ಜಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಒಪ್ಪಿಸಲಾಯಿತು.

ಶ್ರೀ ಯು. ಭೂಪತಿ.—ಹಕ್ಕುಚ್ಯುತಿ ನಿರ್ಣಯವನ್ನು ಇವತ್ತು ತೆಗೆದುಕೊಳ್ಳೋಣ ಅಪಕಾಶ ಕೊಡುತ್ತೇನೆ ಎಂದು ಸಹಾ ಹೇಳಿದ್ದೀರಿ.....

ಕರ್ನಾಟಕದ ಶಾಸಕರಿಗೆ ಸಂಸತ್ ಸದಸ್ಯರಿಗೆ ಕನ್ನಡವನ್ನು ಜಾರಿಗೆ ತರುವಲ್ಲಿ ಆಸಕ್ತಿ ಇಲ್ಲವೆನ್ನುವ ಆಪಾದನೆಯ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ.—ಯಾರು ಇದಕ್ಕೆ ಉತ್ತರ ಕೊಡುತ್ತಾರೋ ಗೊತ್ತಿಲ್ಲ. ನನ್ನ ಈ ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸುತ್ತೇನೆ.

''ಕನ್ನಡಪ್ರಭ ದಿನಪತ್ರಿಕೆಯಲ್ಲಿ ೪ನೇ ಫೆಬ್ರುವರಿ ೮೭ರಲ್ಲಿ ಒಂದು ಪ್ರಕಟಣೆ ಬಂದಿದೆ. ಅದರ ಪ್ರಕಾರ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೊಳಿಸುವಲ್ಲಿ ಕರ್ನಾಟಕದ ಶಾಸಕರು, ಸಂಸತ್ ಸದಸ್ಯರಿಗೆ ಆಸಕ್ತಿ ಇಲ್ಲ ಎಂದು ಕನ್ನಡ ಕಾವಲು ಪಡೆ ಹಾಗೂ ಗಡಿ ಸಲಹಾ ಸಮಿತಿಯ ಅಧ್ಯಕ್ಷರಾದ ಪಾಟೀಲ್ ಪುಟ್ಟಪ್ಪ ಆಪಾದಿಸಿದ್ದಾರೆ.

''ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸದಸ್ಯರು ಹಾಗೂ ಅಧಿಕಾರಿಗಳು ಅವರಲ್ಲಿ ಆಡಳಿತ ಭಾಷೆಯಾಗಿ ಕನ್ನಡವನ್ನು ಜಾರಿಗೊಳಿಸುವ ಬಗ್ಗೆ ಮಾತನಾಡುತ್ತಿದ್ದಾಗ...''

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ಇದನ್ನು ನಾಳೆ ತೆಗೆದುಕೊಳ್ಳೋಣ ಎಂದು ಹೇಳಿದ್ದಾರೆ. ನಾಳೆ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಯು. ಭೂಪತಿ.—ಎಷ್ಟು ದಿನ ಇದನ್ನು ಮುಂದಕ್ಕೆ ಹಾಕುತ್ತೀರಿ.

ಅಧ್ಯಕ್ಷರು.—ಅವರು ಉತ್ತರವನ್ನು ನಾಳೆ ಕೊಡುತ್ತಾರೆಂದು ಹೇಳಿದ್ದಾರೆ.

ಶ್ರೀ ಯು. ಭೂಪತಿ.—ಹೀಗೆ ಆದರೆ ಅದರ ಪ್ರಾಮುಖ್ಯತೆ ಹೊರಟುಹೋಗುತ್ತದೆ.

ಅಧ್ಯಕ್ಷರು.—ನಾಳೆ ಉತ್ತರ ಕೊಡುತ್ತೇವೆಂದು ಹೇಳಿದ್ದಾರೆ, ನಾಳೆ ತೆಗೆದುಕೊಳ್ಳೋಣ.

ಶ್ರೀ. ಕೆ. ಪೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ನಾವು ಒಂದು ಪ್ರಿವಿಲೆಜ್ ಮೋಷನ್ ಅನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು.—ತಾವು ಅದನ್ನು ೧೧ ಗಂಟೆಗೆ ಕೊಟ್ಟಿದ್ದೀರಿ, ನಾಳೆ ತೆಗೆದುಕೊಳ್ಳೋಣ.

ಗಮನ ಸೆಳೆಯುವ ಸೂಚನೆ

ಅಧ್ಯಕ್ಷರು.—ಶ್ರೀಯುತರುಗಳಾದ ಜಿ. ಎಸ್. ಆಚಾರ್, ಕೆ. ಪ್ರತಾಪ ಚಂದ್ರಶೆಟ್ಟಿ, ಎಂ. ವೀರಪ್ಪಮೊಯ್ಲಿ, ಬಸವರಾಜ್, ಬ್ಲೂಸಿಯಸ್ ಡಿಸೌಜ ಇವರುಗಳು ಗಮನ ಸೆಳೆಯುವ ಸೂಚನೆಗಳಿರುವುದರಿಂದ ಆವೇಳೆ ತೆಗೆದುಕೊಳ್ಳೋಣ. ಈಗ ಎರಡನೇ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.